ಅಭಿವೃದ್ಧಿ ವೆಚ್ಚಕ್ಕೆ ತೆಗೆದಿಡಲಾದ ಹಣದ ಪ್ರಮಾಣ

1362 (1643) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ 3 ವರ್ಷದಲ್ಲಿ ಅಭಿವೃದ್ಧಿ ವೆಚ್ಚಕ್ಕೆ ತೆಗೆದಿಡಲಾದ ಹಣ ಎಷ್ಟು ? ವರ್ಷವಾರು ವಿವರ ನೀಡುವುದು.

ಆ) ಈ ವರ್ಷಗಳಲ್ಲಿ ಖರ್ಚಾದ ಹಣವೆಷ್ಟು ? ವರ್ಷವಾರು ವಿವರ ನೀಡುವುದು.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿ) :

ಅ) ಕಳೆದ 3 ವರ್ಷಗಳಲ್ಲಿ ಅಭಿವೃದ್ಧಿ ವೆಚ್ಚಕ್ಕಾಗಿ ಅಯವ್ಯಯದಲ್ಲಿ ಒದಗಿಸಿದ ಹಣ ಈ ಕೆಳಕಂಡಂತೆ ಇರುತ್ತದೆ.

	(ರೂ. ಕೋಟಿಗಳಲ್ಲಿ)
1996-97	8537.56
1997-98	9001.92
1998-99	10199.97
1999-2000	11439.59

ಆ) ಕಳೆದ 3 ವರ್ಷಗಳಲ್ಲಿ ಅಭಿವೃದ್ಧಿ ವೆಚ್ಚಕ್ಕಾಗಿ ಖರ್ಚಾದ ಹಣದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

	(ರೂ. ಕೋಟಿಗಳಲ್ಲಿ)
1996-97	8398.75
1997-98	8394.21
1998-99 (ಪರಿಷ್ಕೃತ ಅಂದಾಜು)	10295.00
1999-2000 (ಆಯವ್ಯಯ ಅಂದಾಜು)	11439.59

ವಾಣಿಜ್ಯ ತೆರಿಗೆಯ ಹಾಕಿಯ ಮೊತ್ತ

1363 (1644) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಹಣಕಾಸು ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಬಾಕಿ ಇರುವ ವಾಣಿಜ್ಯ ತೆರಿಗೆಯ ಮೊತ್ತ ಎಷ್ಟು; (ವರ್ಷವಾರು ವಿವರ ನೀಡುವುದು);

ಆ) ಈ ಬಾಕಿಯನ್ನು (ವಾಣಿಜ್ಯ ತೆರಿಗೆ) ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ನ್ಯಾಯಾಲಯದ ಮುಂದೆ ಇರುವ ವಾಣಿಜ್ಯ ತೆರಿಗೆ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಮಂತ್ರಿಗಳು):

ಅ) ಕಳೆದ ಮೂರು ವರ್ಷಗಳಲ್ಲಿ ಇರುವ ವಾಣಿಜ್ಯತೆರಿಗೆ ಬಾಕಿ ಮೊತ್ತದ ವಿವರ ಈ ಕೆಳಗಿನಂತಿದೆ:

ವರ್ಷ	ಬಾಕಿ (ಮಾರ್ಚಿ ಅಂತ್ಯಕ್ಕೆ ಕೊನೆ ಗೊಂಡಂತೆ) (ರೂ. ಕೋಟಿಗಳಲ್ಲಿ)
1997-98	774.13
1998-99	1073.19
1999-2000 (ದಿನಾಂಕ 31.12.99ರಲ್ಲಿದ್ದಂತೆ ಅಂದಾಜು)	795.97

ಆ) ವಾಣಿಜ್ಯ ತೆರಿಗೆ ಬಾಕಿ ವಸೂಲಿಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ:

1) ಕ.ಮಾ.ತೆ. ಕಲಂ 13(3) (ಎ) ಮೇರೆಗ ಕಂದಾಯ ಇಲಾಖೆಯ ಅಧಿಕಾರಿಗಳ ಮೂಲಕ ಭೂ ಕಂದಾಯದ ಬಾಕಿಯೆಂದು ಪರಿಗಣಿಸಿ ವಸೂಲಿ ಕ್ರಮ ಕೈಗೊಳ್ಳಲಾಗಿದೆ.

2) ಕ.ಮಾ.ತೆ.ಕಲಂ 13(3) (ಎ) ಮೇರೆಗೆ ಇಲಾಖಾ ಅಧಿಕಾರಿಗಳಿಂದ (ತೆರಿಗೆ ವಸೂಲಿ ಅಧಿಕಾರಿ) ತೆರಿಗೆ ಬಾಕಿದಾರರ ಸ್ಥಿರ- ಚರಾಸ್ತಿ ಜಪ್ತು ಮತ್ತು ಲೆಲಾವು ಮಾಡುವ ಮೂಲಕ ವಸೂಲಿ ಕ್ರಮಕೈಗೊಳ್ಳಲಾಗಿದೆ.

3) ಕ.ಮಾ.ತೆ. ಕಲಂ 13(3) (ಬಿ) ಮೇರೆಗೆ ವಿವಿಧ ಕೋರ್ಟ್‌ಗಳ ಮೂಲಕ ಕೋರ್ಟಿನ ದಂಡದಂತೆ ತೆರಿಗೆ ಬಾಕಿಗೆ ವಸೂಲಿ ಕ್ರಮ ಕೈಗೊಳ್ಳಲಾಗಿದೆ.

4) ಕ.ಮಾ.ತೆ.ಕಲಂ 14ರ ಮೇರೆಗೆ ತೆರಿಗೆ ಬಾಕಿದಾರರ ಬ್ಯಾಂಕ್ ಖಾತೆ ಹಾಗೂ ಖರೀದಿದಾರರಿಂದ ಹಣ ಜಪ್ತು ಮಾಡಿಸುವ ಮೂಲಕ ವಸೂಲಿ ಕ್ರಮ ಕೈಗೊಳ್ಳಲಾಗಿದೆ.

ಇ) 2310 ವರ್ಗಾವಾರು ಪ್ರಕರಣಗಳ ಸಂಖ್ಯೆ ಈ ಕೆಳಗಿನಂತಂದೆ:

1)	ಶ್ರೇಷ್ಠ ನ್ಯಾಯಾಲಯದ ಮುಂದೆ (ವಿಶೇಷ ರಜೆ ಅರ್ಜಿಗಳು)	- 392
2)	ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ	- 1684
3)	ಸಿವಿಲ್ ನ್ಯಾಯಾಲಯದ ಮುಂದೆ	- 234
	ಒಟ್ಟು	**- 2310**